ಯೋಚಿಸುವಂತಾಯಿತು. ಸ್ವಾರ್ಥಪೂರಿತವಾಗಿದ್ದರೂ ನಿಜವಿತ್ತಲ್ಲ. ಮತ್ತದೇ ಕಾಯಿ. ಅದೇ ಕತ್ತಿ. ಕತ್ತರಿಸಿದ ರೀತಿ ಮಾತ್ರ ಬೇರೆ.

ಎಲ್ಲ ಹಳಹಳಿಗಳ ಜೊತೆಗೆ ವಿಮಾನ ಅವರನ್ನು ಹ್ಯೂಸ್ಟನ್‌ನಲ್ಲಿಳಿಸಿತು. ಸುನಿತಾ, ಸುಧೀರ ಕೈ ಮಾಡುತ್ತಾ ಮುಂದೆ ಬಂದು ಕರೆದುಕೊಂಡು ಹೋದರು. ಸುನಿತಾ ಅಲ್ಲಿಯೇ ಎರಡು ಅಪಾರ್ಟ್‌ಮೆಂಟ್ ತೆಗೆದುಕೊಂಡಿದ್ದಳು. ನಾಲ್ಕು ಬೆಡ್‌ರೂಮ್‌ಗಳು, ಜೊತೆಗೆ ಸಿಂಗರಿಸಿಕೊಳ್ಳಲೊಂದು ಪೌಡರ್ ರೂಮ್, ಕಿಚನ್, ಲಿವಿಂಗ್ ರೂಮ್‌ಗಳನ್ನೊಳಗೊಂಡ ವಿಶಾಲವಾದ ಮನೆ, ಸುತ್ತ ಹೂದೋಟ, ಲಾನ್ ನೋಡಿ ದಂಪತಿ ಸಂತೋಷಭರಿತರಾದರು. ಹಿಂದೆ ಹಸಿರು ಸೇಬಿನ ಮರಗಳು ಓಲಾಡುತ್ತಿದ್ದರೆ ಅವುಗಳಲ್ಲಿ ಪ್ರಾಣಿ, ಪಕ್ಷಿಗಳು ಬೀಡು ಬಿಟ್ಟು ಅತ್ಯಂತ ಮನೋಹರವೆನಿಸುತ್ತಿತ್ತು. “ಮನಿ ಭಾಳ ಛಂದದ ಸುನಿ” ಎಂದು ಇಬ್ಬರೂ ಸಂಭ್ರಮಿಸಿದರು. ನಿತ್ಯ ಸುನಿತಾ ಕಾರಿನಲ್ಲಿ ಅವರನ್ನು ಡೌನ್‌ಟೌನಿಗೆ ಕರೆದೊಯ್ಯುತ್ತಿದ್ದಳು. ಎಲ್ಲರೊಂದಿಗೆ ನಯಾಗರ ನೋಡಿದರು. ಅದರ ಅಗಾಧತೆಗೆ ವಿಸ್ಮಿತರಾದರು. ಮೊದಲ ಕೊರತೆ ಕಂಡು ಬಂದದ್ದು ಮೊಮ್ಮಕ್ಕಳಲ್ಲೇ. ಸುನಿತಾ, ಸುಧೀರ ಮಕ್ಕಳೊಂದಿಗೆ ಇಂಗ್ಲಿಷ್‌ನಲ್ಲೇ ವ್ಯವಹರಿಸುತ್ತಿದ್ದುದರಿಂದ ಅವರಿಗೆ ಕನ್ನಡ ಕೇಳಿ ಗೊತ್ತೇ ಹೊರತು ಮಾತನಾಡಲು ಬರುತ್ತಿರಲಿಲ್ಲ. ಬರೀ

